**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 101/2018**

| | | | |
|---|---|---|---|
| **ಹೆಸರು** | **:** | **ರವೀಂದ್ರ** | **ಚಾ.ಸಾ.17** |
| **ತಂದೆಯ ಹೆಸರು** | **:** | **ಕಾಶಿನಾಥ** | **ಪ್ರಾ.ಸಾ.17** |
| **ವಯಸ್ಸು** | **:** | **41 ವರ್ಷ** | **ದಿನಾಂಕಃ 04-12-2023** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ರುದ್ರನೂರು** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-18 ರವರು ನನಗೆ ಗೊತ್ತು. ಪ್ರಾಸಾ-15 ರವರು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ನಿಪಿ-11 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ನಿಪಿ-11 ರ ಭಾವಚಿತ್ರವನ್ನು ರುದ್ರನೂರು ಗ್ರಾಮದ ಹೊರ ವಲಯದಲ್ಲಿರುವ ಮನೆಯ ಮುಂದೆ ತೆಗೆದುಕೊಂಡಿದ್ದಾರೆ. ಪೋಲಿಸರು ಸಹಿ ಮಾಡು ಎಂದು ಕರೆದಾಗ ಸಹಿ ಮಾಡಿರುತ್ತೇನೆ. ಆಗ ನನ್ನ ಜೊತೆ ಚಾಸಾ-18 ರವರು ಇದ್ದರು ಇನ್ನೊಬ್ಬ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಆ ಸಮಯಕ್ಕೆ ಪಡೆದ ಸಹಿ ಈಗ ನೋಡುತ್ತೀರು ದಾಖಲೆಯಲ್ಲಿದೆ. ಸದರಿ ದಾಖಲೆಯನ್ನು ನಿಪಿ-12 ಎಂದು ಗುರುತಿಸಲಾಯಿತು. ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. 2017 ರಲ್ಲಿ ನಾನು ನಿಪಿ-12 ರಲ್ಲಿ ಸಹಿ ಮಾಡಿದ್ದೇನೆ. ಸಹಿಯನ್ನು ನಾನು ದೇವಸ್ಥಾನ ಹತ್ತಿರ ಕುಳಿತಾಗ ಸಹಿ ಪಡೆದುಕೊಂಡು ನಂತರ ನನಗೆ ಕರೆದುಕೊಂಡು ಹೋಗಿ ಭಾವಚಿತ್ರವನು ಪಡೆದಿದ್ದಾರೆ. ಆಗ ಸಮಯ ಬೆಳಗ್ಗೆ 9 ಗಂಟೆ ಸುಮಾರು ಆಗಿತ್ತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ.ಎನ್.ಬಿ. ವಕೀಲರಿಂದಃ-</u>**

ನಿಪಿ-12 ರ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಖಾಲಿ ಕಾಗದಲ್ಲಿ ಸಹಿ ಮಾಡಿದ್ದೇನೆ ಸರಿ. ಯಾವ ಕಾರಣಕ್ಕಾಗಿ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**